ಶ್ರೀ ವಾಟಾಳ್ ನಾಗರಾಜ್ :– ಕಾಸರಗೋಡಿನಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದಾರೆ...

Sri Qumarul Islam :– Sir, the temporary Three-Language Formula Policy has really affected the lingustic minorities. I have already suggested that it requires reconsideration and consultation with the Member of the Legislature.

Mr. Speaker :– The Hon.Minister for Education has already given an assurance that those of you who have still reservations about this policy which is being persued by the Government, you can always go and discuss in a group.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ :– ಮಾನ್ಯ ಅಧ್ಯಕ್ಷರೇ, ಈ ನಗರ ಯೋಜನೆ ಇಲಾಖೆಯು ಒಂದು ಅಟಾನಮಸ್ ಡಿಪಾರ್ಟ್‌ಮೆಂಟ್ ಆಗಿದೆ. ಈ ಡಿಪಾರ್ಟ್‌ಮೆಂಟ್‌ಗೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಇದುವರೆಗೂ ಮಾಡಿಲ್ಲ ಎಂಬ ಅಭಿಪ್ರಾಯ ನಮ್ಮಲ್ಲಿ ಇದೆ. ಒಂದು ವೇಳೆ ಅಂಥ ಸಿ. ಅಂಡ್ ಆರ್. ರೂಲ್ಸ್‌ನ್ನು ಮಾಡಿದ್ದಾಗಿದ್ದರೆ ಯಾವಾಗ ಮಾಡಿದ್ದಾರೆ ? ಈ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ದಯಮಾಡಿ ತಿಳಿಸಬೇಕು.

ಶ್ರೀ ಕೆ. ಜೆ. ಜಾರ್ಜ್ :– ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಈ ಇಲಾಖೆಯಲ್ಲಿ ಇದೆ. ಅದರ ಪುನರ್‌ವಿಮರ್ಶೆಯನ್ನು ಈಗ ಮಾಡುತ್ತಾ ಇದ್ದೇವೆ. ಅದು ಸರ್ಕಾರದ ಮುಂದಿದೆ. ಆ ಬಗ್ಗೆ ಆದಷ್ಟು ಬೇಗ ಒಂದು ತೀರ್ಮಾನವನ್ನು ಕೈಗೊಳ್ಳುತ್ತೇವೆ.

ವಿಷಯ :– ಕರ್ನಾಟಕ ಅಭಿವೃದ್ಧಿ ನಿಗಮದಿಂದ ಪ್ರಾಥಮಿಕ ಪಾಠಗೂ ಪ್ರೌಢಶಾಲೆಗಳನ್ನು ಕಟ್ಟಲು ಬಿಡುಗಡೆಯಾದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 249 (896)

ಶ್ರೀ ಬಿ. ಹಂಪನಗೌಡ (ಸಿಂಧನೂರ್) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಯಚೂರು ಜಿಲ್ಲೆಗೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮದಿಂದ ಪ್ರಾಥಮಿಕ ಪಾಠಗೂ ಪ್ರೌಢಶಾಲೆಗಳನ್ನು ಕಟ್ಟಲು ಈ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು ?

2) ಹಾಗಿದ್ದಲ್ಲಿ ಕಾಮಗಾರಿಗಳು ಯಾವ ಹಂತದಲ್ಲಿವೆ ?

ಶ್ರೀ ಎಂ. ವೀರಪ್ಪ ಮೊಯಿಲಿ :– (ಶಿಕ್ಷಣ ಮಂತ್ರಿಗಳು)

1) ರೂ. 259.58 ಲಕ್ಷ.

2) ಶಾಲಾ ಕೊಠಡಿಗಳ ಮತ್ತು ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಲಾಗಿದೆ. ಅಂದಾಜು ಮತ್ತು ನಕ್ಷೆ ತಯಾರಿಸಲು ನಿರ್ದೇಶನಗಳನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಿಕೊಡಲಾಗುತ್ತಿದೆ. ಇಲ್ಲಿಯವರೆಗೆ 19 ಕಿರಿಯ ಪ್ರಾಥಮಿಕ ಶಾಲಾ ಕೊಠಡಿಗಳು ಮತ್ತು 88 ಹಿರಿಯ ಪ್ರಾಥಮಿಕ ಶಾಲಾ ಕೊಠಡಿಗಳ ನಕ್ಷೆ ಮತ್ತು ಅಂದಾಜು ತಯಾರಾಗಿದ್ದು, ಜಿಲ್ಲಾ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಆಡಳಿತಾತ್ಮಕ ಅನುಮೋದನೆ ನೀಡಲು ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ.

ಶ್ರೀ ಬಿ. ಹಂಪನಗೌಡ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ರಾಯಚೂರು ಜಿಲ್ಲೆಗೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮದಿಂದ ಶಾಲಾ ಕಟ್ಟಡಗಳಿಗಾಗಿ 259.58 ಲಕ್ಷ ರೂ. ಗಳನ್ನು ಒದಗಿಸಿದ್ದೇವೆಂದು ತಿಳಿಸಿದ್ದಾರೆ. ಅಂತೆಯೇ ರಾಯಚೂರು ಜಿಲ್ಲೆಯಲ್ಲಿ ಸುಮಾರು 800 ಶಾಲಾ ಕೊಠಡಿಗಳನ್ನು ಕಟ್ಟಬೇಕಾದಂಥ ಅವಶ್ಯಕತೆ ಇದೆ. ಆದರೆ ಉತ್ತರದಲ್ಲಿ 88 ಹಿರಿಯ ಪ್ರಾಥಮಿಕ ಶಾಲಾ ಕೊಠಡಿಗಳು ಮತ್ತು 19 ಕಿರಿಯ ಪ್ರಾಥಮಿಕ ಶಾಲಾ ಕೊಠಡಿಗಳೆಂದು ಹೇಳಿದ್ದಾರೆ. ಸರ್ಕಾರದವರು ಇಷ್ಟು ನಿಧಾನಗತಿಯಲ್ಲಿ ಕಟ್ಟಿಸಿಕೊಂಡು ಹೋಗುವುದಾದರೆ ನಮ್ಮಲ್ಲಿ ಬೇಕಾಗಿರುವ 800 ಶಾಲಾ ಕೊಠಡಿಗಳನ್ನು ಕಟ್ಟಲು 10 ವರ್ಷಗಳು ಬೇಕಾಗಬಹುದು. ಆದುದರಿಂದ ತ್ವರಿತವಾಗಿ ಈ ಶಾಲಾ ಕೊಠಡಿಗಳನ್ನು ಕಟ್ಟಲು ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿ ಕೊಡನೆ ಚರ್ಚಿಸಿ ತೀವ್ರಗತಿಯಲ್ಲಿ ಈ ಕೆಲಸವನ್ನು ಮಾಡಿ ಮುಗಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ಅಧ್ಯಕ್ಷರೇ, ಶಾಲಾ ಕೊಠಡಿಗಳನ್ನು ಕಟ್ಟಿರತಕ್ಕಂಥ ಕಾರ್ಯ-ಭಾರವನ್ನು ನಾವು ಲ್ಯಾಂಡ್‌ಆರ್ಮಿಯವರಿಗೆ ಬಿಟ್ಟುಕೊಟ್ಟಿದ್ದೇವೆ. ಅವರು ಈ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಪೂರೈಸಿ ಕೊಡುತ್ತಾರೆಂದು ಆದಕ್ಕೆ ಬೇಕಾದಂಥ ಹಣವನ್ನು ನಾವು ಒದಗಿಸಿದ್ದೇವೆ. ರಾಯಚೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಿಗಾಗಿ 415 ಕೊಠಡಿಗಳನ್ನು ಮಂಜೂರು ಮಾಡಿದ್ದೇವೆ. ಹಿರಿಯ ಪ್ರಾಥಮಿಕ ಶಾಲೆಗಳಿಗಾಗಿ 360 ಕೊಠಡಿಗಳನ್ನು ಮತ್ತು ಪ್ರೌಢ ಶಾಲೆಗಳಿಗಾಗಿ 60 ಕೊಠಡಿಗಳನ್ನು ಮಂಜೂರು ಮಾಡಿದ್ದೇವೆ ಈ ಬಗ್ಗೆ ಹಣದ ಕೊರತೆ ಇಲ್ಲ. ಅವರಿಗೆ ಬೇಕಾದ ಹಣವನ್ನು ಇಲಾಖೆಯಿಂದ ಬಿಡುಗಡೆ ಮಾಡುತ್ತಾ ಇದ್ದೇವೆ. ಪೈದ್ರಾಬಾದ್ ಕರ್ನಾಟಕದ ಕುರಿತಾದ ಯೋಜನೆಗಳ ಬಗ್ಗೆ ಅಂದರೆ ಈ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಹಣ ಮಂಜೂರು ಮಾಡಿದಾಗ ನಾವು ಸ್ವಲ್ಪ ಅಂದಾಜು ಪೊತ್ರವನ್ನು ಜಾಸ್ತಿ ಮಾಡಿದ್ದೇವೆ. ಒಂದುವೇಳೆ ಮಾರ್ಚ್ ತಿಂಗಳು ಮುಗಿಯುವುದರೊಳಗಾಗಿ ಕೂಡ ಕೆಲಸ ಉಳಿದಿದ್ದರೆ ಆದಕ್ಕೆ ವಿಶೇಷತಃ ಶಾಲಾ ಕೊಠಡಿಗಳ ವಿಚಾರದಲ್ಲಿ ಒಂದು ನಿಗದಿತ ಸಮಯದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಆದುದರಿಂದ ಆದಷ್ಟು ಜಾಗ್ರತೆ ಕೆಲಸವನ್ನು ಮಾಡುತ್ತೇವೆ.

ಶ್ರೀ ಬಿ. ಪಂಪನಗೌಡ :– ತಾವುಗಳು ಈ ಉದ್ದೇಶಕ್ಕಾಗಿ ಕೊಟ್ಟಂಥ ಹಣವನ್ನು ಲ್ಯಾಂಡ್ ಆರ್ಮಿ ಯವರು ಕಟ್ಟಡವನ್ನು ಕಟ್ಟಲು ಉಪಯೋಗಿಸುತ್ತಾರೆ. ತಮ್ಮ ಅಭಿಪ್ರಾಯದಲ್ಲಿ 35 ಸಾವಿರ ರೂಪಾಯಿಗಳಿಗೆ ಒಂದು ಕೊಠಡಿ ಆಗುತ್ತದೆ ಎಂದು ಇದೆ. ಆದರೆ ನಮ್ಮ ಭಾಗದಲ್ಲಿ ಕಪ್ಪು ಮಣ್ಣು ಪ್ರದೇಶವಾಗಿರುವುದರಿಂದ ಒಂದು ಕೊಠಡಿಗೆ ಸುಮಾರು 50–60 ಸಾವಿರ ರೂಪಾಯಿಗಳವರೆಗೆ ಬೇಕಾಗುತ್ತದೆ. ಆದುದರಿಂದ ಇನ್ನೂ ಸ್ವಲ್ಪ ಹೆಚ್ಚು ಹಣವನ್ನು ಕೊಡುವ ಬಗ್ಗೆ ಏನು ನಿರ್ಧಾರ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ :– ನಾವು ಅಂದಾಜು ಪಟ್ಟಿಯನ್ನು ಮಾಡುವಾಗ ಇದನ್ನೆಲ್ಲಾ ಗಮನ-ದಲ್ಲಿಟ್ಟುಕೊಂಡೇ ಮಾಡಿದ್ದೇವೆ. ಪ್ರಾಥಮಿಕ ಶಾಲಾ ಕೊಠಡಿಗಳಿಗೆ ಒಂದಕ್ಕೆ 30 ಸಾವಿರ ರೂ.ಗಳ ವರೆಗೆ, ಹಿರಿಯ ಪ್ರಾಥಮಿಕ ಶಾಲಾ ಕೊಠಡಿಗಳಿಗೆ ಒಂದಕ್ಕೆ 40 ರಿಂದ 45 ಸಾವಿರ ರೂ.ಗಳ ವರೆಗೆ ಮತ್ತು ಪ್ರೌಢ ಶಾಲಾ ಕೊಠಡಿಗಳಿಗೆ 50 ರಿಂದ 60 ಸಾವಿರ ರೂ.ಗಳ ವರೆಗೆ ಖರ್ಚು ತಗಲಬಹುದು ಎಂದು ಅಂದಾಜು ಮಾಡಿದ್ದೇವೆ. ಹೀಗೆ ಸಡಿಲುಬಿಟ್ಟರೆ 1 ಲಕ್ಷ ರೂ.ಗಳ ವರೆಗೆ ಖರ್ಚು ಮಾಡುತ್ತಾರೆ. ಆದರೆ ಅಂದಾಜಿಗೆ ಸೀಮಿತವಾಗಿ ಖರ್ಚು ಮಾಡಬೇಕೆಂದು ಹಣ ಒದಗಿಸಿದ್ದೇವೆ.

ಸಾಮಾನ್ಯವಾಗಿ ಹೈದ್ರಾಬಾದ್ ಕರ್ನಾಟಕದ ಪ್ರದೇಶ ಬಹಳ ಹಿಂದುಳಿದಿದ್ದೆಂದು ಪೂರ್ತಿ ಹಣ ನಾವು ಕೊಡುತ್ತಿದ್ದೇವೆ, ಉಳಿದ ಕಡೆ ಅಷ್ಟೂ ಕೊಡುತ್ತಿಲ್ಲ. ಅಲ್ಲಿನ ಸಾರ್ವಜನಿಕರು ಕೂಡ ಸ್ವಲ್ಪ ಪಾಲು ಕೊಡ ಬೇಕಾಗುತ್ತದೆ. ಕಟ್ಟಡದ ವೆಚ್ಚ ಹೆಚ್ಚಾಗುವುದಾದರೆ ಅವರೂ ಸ್ಪಂದಿಸಬೇಕು. ಇಷ್ಟೊಂದು ಪಣ ಕೊಟ್ಟರೂ ಸಾಲುತ್ತಿಲ್ಲ ಎಂಬುದು ಸಮಯೋಚಿತ ಮಾತಾಗುವುದಿಲ್ಲ ಇಷ್ಟು ಧಾರಾಳವಾಗಿ ಹೈದ್ರಾಬಾದ್‌ಕರ್ನಾಟಕಕ್ಕೆ ಹಿರಿಯಾಕ್ಕೆ ಕೊಡುತ್ತಿದ್ದೇವೆ, ಅದನ್ನು ಸ್ವೀಕರಿಸಿ ಸಾಲದ್ದನ್ನು ಭರಿಸುವ ಮನೋವೃತ್ತಿ ಅಲ್ಲಿನ ಜನರ ಬೆಳೆಯ ಬೇಕು. ಇಲ್ಲದಿದ್ದರೆ ಯಾವ ಹಿಂದುಳಿದ ಪ್ರದೇಶವೂ ಮುಂದುವರಿಯುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ :– ನೀವು ಲ್ಯಾಂಡ್ ಆರ್ಮಿಗೆ ಈ ಕೆಲಸ ವಹಿಸಿದ್ದೀರಿ 29,500 ರೂ.ಗೆ ಒಂದು ಶಾಲಾ ಕೊಠಡಿ ಕಟ್ಟಬೇಕೆಂದು ಹೇಳಿದ್ದೀರಿ. ಆದರೆ ಅವರು ಏನು ಹೇಳುತ್ತಾರೆಂದರೆ, ಅಷ್ಟು ಹಣದಲ್ಲಿ ಪ್ರಾಥಮಿಕ ಶಾಲೆ ಕಟ್ಟಡ ಕಟ್ಟಲು ಸಾಧ್ಯವಿಲ್ಲ. ಈ ಸಲದ ಡಿಎಸ್‌ಆರ್ ರೇಟ್ 40 ಸಾವಿರ ಇದೆ; ಲೋಕೋಪ-ಯೋಗಿ ಇಲಾಖೆಯವರು, ಬಿಡಿಓನವರೂ ಕೂಡ ಡಿಎಸ್‌ಆರ್ ರೇಟ್ ಪ್ರಕಾರವೇ ಕಟ್ಟಡ ಕಟ್ಟುತ್ತಿದ್ದಾರೆ; ಆದರೆ ಲ್ಯಾಂಡ್ ಆರ್ಮಿಯವರಿಗೆ ಮಾತ್ರ 29,500 ಕೊಟ್ಟಿರುವುದರಿಂದ ಅವರು ಇನ್ನೂ ಕಾಮಗಾರಿ ಪ್ರಾರಂಭವನ್ನೇ ಮಾಡಿಲ್ಲ. ಆದ್ದರಿಂದ ಇದರ ಬಗ್ಗೆ ಲ್ಯಾಂಡ್ ಆರ್ಮಿ ಫೋರ್‌ಮನ್ ಅವರನ್ನು ಕರೆಸಿಕೊಂಡು ತಾವು ವಿಚಾರ ಮಾಡಬೇಕು. ಇನ್ನು ಎರಡನೆಯದು ಎಲ್ಲಿ ತುರ್ತಾಗಿ ಕಟ್ಟಡಗಳ ಅವಶ್ಯಕತೆ ಇದೆಯೋ ಅಲ್ಲಿ ಕಟ್ಟುವ ವ್ಯವಸ್ಥೆ ಮಾಡಿಲ್ಲ. ಎಜ್ಯುಕೇಷನ್ ಸೆಕ್ರೆಟರಿಯವರು ಇಲ್ಲೇ ಕೂತು ತಾಲೂಕುವಾರು ಆಪರೇಷನ್ ಬ್ಲಾಕ್ ಬೋರ್ಡ್‌ನಲ್ಲಿ ಸ್ಕೀಮ್‌ನಲ್ಲಿ ಹಂಚಿದ್ದಾರೆ. ಆದರೆ ಅವಶ್ಯಕತೆ ಎಲ್ಲಿದೆಯೋ ಅಲ್ಲಿ ಕೊಡಲಿಲ್ಲ. ಇರುವ ಕಡೆನೇ ಎರಡು ಮೂರು ಕಟ್ಟಡ ಕೊಟ್ಟಿದ್ದು ಒಂದೂ ಇಲ್ಲದ ಕಡೆ ಏನೂ ಕೊಟ್ಟಿಲ್ಲ. ಆದ್ದರಿಂದ ತಾವು ಕಟ್ಟಡಗಳನ್ನು ಗುರ್ತಿಸುವಾಗ ಇನ್ನೊಂದು ಸಲ ಸರಿಯಾಗಿ ಅವಶ್ಯಕತೆ ಇರುವ ಕಡೆ ಕೊಡುವ ಆಜ್ಞೆ ಮಾಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಈಗಾಗಲೇ ನಾವು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಜತೆಯಲ್ಲಿ ಈ ಬಗ್ಗೆ ಸಮಾಲೋಚನೆ ಮಾಡಿದ್ದೇವೆ. ಅವರಿಗೆ ಒಂದು ಆದೇಶ ಕೊಟ್ಟಿದ್ದೇವೆ; ಏನೆಂದರೆ ಪೆಡ್ಯೂಲ್‌ರೇಟ್ ಏನಿದೆ ಅದರ ಮೇಲೆ 10 ಪರ್ಸೆಂಟ್ ಹೋಗಬಹುದೆಂದು. ಇನ್ನೂ ಹೆಚ್ಚು ಸಡಿಲಗೊಳಿಸಬೇಕೆಂದರೆ ಅದು ಆಗುವುದಿಲ್ಲ ಈ ಕೆಲಸವನ್ನು ಬೇರೆಯವರಿಗೆ ಕೊಡಬೇಕಾಗುತ್ತದೆ. ಅವರು ಕೇಳಿದಷ್ಟನ್ನು ನಾವು ಕೊಡಲು ಆಗುವುದಿಲ್ಲ.

ಆಮೇಲೆ ಸ್ಥಳ ಸರಿಯಾದ ಕಡೆ ನೋಡಿಲ್ಲವೆಂದು ತಾವು ಹೇಳಿದ್ದೀರಿ. ಈಗ ನಾವು ಎರಡು ಹಂತದಲ್ಲಿ ಈ ಶಾಲಾ ಕೊಠಡಿಗಳನ್ನು ಮಂಜೂರು ಮಾಡಿದ್ದೇವೆ. ಈ ವರ್ಷದಲ್ಲೇ ನಮಗೆ 40 ಕೋಟಿ ಅಥವಾ 50 ಕೋಟಿ ಆಪರೇಷನ್ ಬ್ಲಾಕ್‌ಬೋರ್ಡ್‌ನಲ್ಲಿ ಖರ್ಚುಮಾಡಬೇಕಾಗಿತ್ತು. ಅದಕ್ಕಾಗಿ ಮೊದಲನೆಯ ಹಂತದಲ್ಲಿ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್ ಹತ್ತಿರ ಪಟ್ಟಿ ತರಿಸಿ ಅದರ ಪ್ರಕಾರ ಕಟ್ಟಡ ಕಟ್ಟಲು ಹಣವನ್ನು ಬಿಡುಗಡೆ ಮಾಡಿದೆವು. ಎರಡನೇ ಹಂತದಲ್ಲಿ ಶಾಸಕರು ಎಲ್ಲೆಲ್ಲಿ ಕವರ್ ಮಾಡಿಲ್ಲವೆಂದು ಹೇಳಿದ್ದರೋ ಅಲ್ಲಿ ಕೈಗೆತ್ತಿಕೊಂಡೆವು. ಈಗ ಮತ್ತೆ ಮೊನ್ನೆ ಮೂರು ವಾರದ ಹಿಂದೆ ಹೈದ್ರಾಬಾದ್ ಪ್ರದೇಶ ಅಭಿವೃದ್ಧಿ ಮಂಡಲಿ ಮೀಟಿಂಗ್ ನಡೆಯಿತು; ಅಲ್ಲಿ ತಾರತಮ್ಯ ಎಲ್ಲಿಲ್ಲಿ ಆಗಿದೆ ಅದನ್ನೆಲ್ಲ ಸೇರಿಸಿ 20 ನೇ ತಾರೀಖು ಅಂದರೆ ನಾಳೆಯೊಳಗೆ ತಾವು ಒಂದು ಪಟ್ಟಿ ಕೊಡಬೇಕೆಂದು ನಿರ್ಣಯವಾಗಿದೆ. ಅದರಂತೆ ತಾವು ಪಟ್ಟಿ ಕೊಟ್ಟರೆ ಅದರಂತೆ ಹೆಚ್ಚು ಕೆಲಸ ತೆಗೆದು ಕೊಳ್ಳಲು ಸಾಧ್ಯವಾದರೆ ಆ ಕೆಲಸಗಳನ್ನು ಸಹ ಕೈಗೊಳ್ಳುತ್ತೇವೆ.

ವಿಷಯ :– ವೈದ್ಯಕೀಯ ಕಾಲೇಜುಗಳು ನಿಗದಿ ಮಾಡಿದ್ದ ಸೀಟುಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 144 (471)

ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ವರ್ಷ ಯಾವ ಯಾವ ವೈದ್ಯಕೀಯ ಕಾಲೇಜುಗಳು ನಿಗದಿ ಮಾಡಿದ್ದ ಸೀಟುಗಳಿಗಿಂತ ಹೆಚ್ಚಿಗೆ ಸೀಟುಗಳನ್ನು ಹೊಂದಿವೆ ?

ಆ) ಇದಕ್ಕೆ ಭಾರತೀಯ ವೈದ್ಯಕೀಯ ಮಂಡಲಿಯ ಪೂರ್ವಾನುಮತಿ ದೊರಕಿದೆಯೇ ?

ಇ) ಶಿಕ್ಷಕ ಮತ್ತು ವಿದ್ಯಾರ್ಥಿಗಳ ಅನುಪಾತವನ್ನು ಯಾವ ವೈದ್ಯಕೀಯ ಕಾಲೇಜು ಪಾಲಿಸಿಲ್ಲ ?

ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :–

ಅ) ಈ ಕೆಳಕಂಡ ವೈದ್ಯಕೀಯ ಕಾಲೇಜುಗಳು ಸರ್ಕಾರವು ನಿಗದಿ ಮಾಡಿದ ಸೀಟುಗಳಿಗಿಂತ ಹೆಚ್ಚಿಗೆ ಸೀಟುಗಳನ್ನು ಹೊಂದಿವೆ :

1) ಜೆ. ಜೆ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ
2) ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು.
3) ಆದಿಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು.
4) ಬಿ.ಎಲ್.ಡಿ.ಇ.ಎ. ವೈದ್ಯಕೀಯ ಕಾಲೇಜು, ವಿಜಾಪುರ.
5) ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ.

ಆ) ಇಲ್ಲ.

ಇ) ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜೊಂದನ್ನು ಬಿಟ್ಟು ಉಳಿದ ಯಾವ ವೈದ್ಯಕೀಯ ಕಾಲೇಜುಗಳೂ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಅನುಪಾತವನ್ನು (Ratio) ಪಾಲಿಸಿಲ್ಲ.

ಈ) ಸದ್ಯಕ್ಕೆ ಯಾವ ಕ್ರಮಗಳನ್ನು ಕೈಗೊಂಡಿಲ್ಲ.

ಶ್ರೀ ಜಿ. ರಾಜುಗೌಡ :– ಯಾವುದಾದರೂ ಸರ್ಕಾರಿ ವೈದ್ಯ ಕಾಲೇಜಾಗಲಿ ಅಥವಾ ಖಾಸಗಿ ವೈದ್ಯ ಕಾಲೇಜಾಗಲಿ ನಿಗದಿ ಪಡಿಸಿರುವ ಸೀಟಿಗಿಂತ ಹೆಚ್ಚಿಗೆ ತೆಗೆದುಕೊಳ್ಳಬೇಕಾದರೆ ಅದಕ್ಕೆ ಭಾರತೀಯ ವೈದ್ಯಕೀಯ ಮಂಡಲಿಯ ಪರವಾನಿಗೆ ಬೇಕು. ನಮ್ಮ ಕರ್ನಾಟಕದಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿಗೆ ತೆಗೆದುಕೊಂಡಿರುವ ಕಾಲೇಜುಗಳ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರೆ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದೀರಿ. ಬಹುಶಃ ಈ ಕಾಲೇಜುಗಳು ಸರ್ಕಾರದ ನಿಯಂತ್ರಣದಲ್ಲಿವೆಯೇ ಅಥವಾ ಇಲ್ಲವೋ ಎಂಬುದನ್ನು ತಿಳಿಸುತ್ತೀರಾ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಕೆಲವು ಕಾಲೇಜುಗಳು ಸರ್ಕಾರದ ವ್ಯಾಪ್ತಿಯಲ್ಲಿವೆ ಕೆಲವು ಖಾಸಗೀ ಕಾಲೇಜುಗಳು ಸಹ ಇವೆ.